# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | 275 (310) |
| **ಸದಸ್ಯರ ಹೆಸರು** | : | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| **ಉತ್ತರಿಸ ಬೇಕಾದ ದಿನಾಂಕ** | : | 29.01.2026 |
| **ಉತ್ತರಿಸುವ ಸಚಿವರು** | : | ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಪ್ರಸ್ತುತ ಜಾರಿಯಲ್ಲಿರುವ ಪ್ರವಾಸೋದ್ಯಮ ನೀತಿ (Tourism Policy) ಯ ಮುಖ್ಯ ಅಂಶಗಳು ಯಾವುವು; ಈ ನೀತಿಯಂತೆ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಯಾವ ರೀತಿಯ ಕ್ರಮಗಳನ್ನು ಕೈಗೊಳ್ಳಲಾಗಿದೆ; | ಪ್ರಸ್ತುತ ಜಾರಿಯಲ್ಲಿರುವ ಕರ್ನಾಟಕ ಪ್ರವಾಸೋದ್ಯಮ ನೀತಿ– 2024-29 ರ ಪ್ರಮುಖ ಅಂಶಗಳ ವಿವರಗಳನ್ನು **ಅನುಬಂಧ-1** ರಲ್ಲಿ ಒದಗಿಸಲಾಗಿದೆ.<br><br>ಸದರಿ ನೀತಿಯಂತೆ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಹೋಟೆಲ್, ರೆಸಾರ್ಟ್, ಸ್ವಾಸ್ಥ್ಯ ಕೇಂದ್ರಗಳು, ಇತ್ಯಾದಿ ಯೋಜನೆಗಳಲ್ಲಿ ಖಾಸಗಿ ಹೂಡಿಕೆಗಾಗಿ ಸ್ವೀಕೃತವಾಗಿರುವ ಪ್ರಸ್ತಾವನೆಗಳಿಗೆ ತಾತ್ವಿಕ ಅನುಮೋದನೆಯನ್ನು ನೀಡಲಾಗಿದೆ. |
| ಆ) | ಕರಾವಳಿ ಪ್ರದೇಶ ಸೇರಿದಂತೆ ನದಿ ಹಾಗೂ ಸಮುದ್ರ ತೀರ, ಚಾರಣ ಪ್ರದೇಶಗಳು, ಧಾರ್ಮಿಕ ಸ್ಥಳಗಳು, ಸಾಂಸ್ಕೃತಿಕ ಆಚರಣೆಗಳು ಹೀಗೆ ವಿಭಿನ್ನ ಸ್ವರೂಪದ ಪ್ರವಾಸೋದ್ಯಮ ಸಾಮರ್ಥ್ಯವಿರುವ ಪ್ರದೇಶಗಳ ಹಿನ್ನೆಲೆಯಲ್ಲಿ ಪ್ರವಾಸೋದ್ಯಮ ನೀತಿಯನ್ನು ಪ್ರಾದೇಶಿಕ ಅಗತ್ಯಗಳಿಗನುಗುಣವಾಗಿ ಅನುಷ್ಠಾನಗೊಳಿಸಲಾಗುತ್ತಿದೆಯೇ; ಈ ಸಂಬಂಧ ಕೈಗೊಂಡಿರುವ ಕ್ರಮಗಳೇನು; | ಪ್ರವಾಸೋದ್ಯಮ ಇಲಾಖೆಯಿಂದ ಕರ್ನಾಟಕ ಪ್ರವಾಸೋದ್ಯಮ ನೀತಿ 2024-29 ನ್ನು ಕರ್ನಾಟಕ ರಾಜ್ಯದ ಕರಾವಳಿ ಪ್ರದೇಶ ಸೇರಿದಂತೆ ನದಿ ಹಾಗೂ ಸಮುದ್ರ ತೀರ, ಚಾರಣ ಪ್ರದೇಶಗಳು, ಧಾರ್ಮಿಕ ಸ್ಥಳಗಳು, ಸಾಂಸ್ಕೃತಿಕ ಆಚರಣೆಗಳು ಹೀಗೆ ವಿಭಿನ್ನ ಸ್ವರೂಪದ ಪ್ರಾದೇಶಿಕ ಅಗತ್ಯತೆಗಳನ್ನು ಗಮನದಲ್ಲಿಟ್ಟುಕೊಂಡು ಜಾರಿಗೆ ತರಲಾಗಿರುತ್ತದೆ. |
| ಇ) | ಕರಾವಳಿಯಲ್ಲಿ ಜಾರಿಯಲ್ಲಿರುವ ಪಾರಿಸಾರಿಕ ನಿಯಮಗಳು ಕರಾವಳಿ ನಿಯಂತ್ರಣ ವಲಯ (CRZ) ನಿಯಮಗಳು ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಅಡ್ಡಿಯಾಗುತ್ತಿರುವ ಹಿನ್ನೆಲೆಯಲ್ಲಿ, ಈ ನಿಯಮಗಳಲ್ಲಿ ಸೂಕ್ತ ಮಾರ್ಪಾಟು ಮಾಡುವ ಕುರಿತು ಕೇಂದ್ರ ಸರ್ಕಾರದ ಇಲಾಖೆಗಳಿಗೆ ಮನವರಿಕೆ ಮಾಡಲಾಗಿದೆಯೇ; ಈ ಕುರಿತು ತೆಗೆದುಕೊಂಡ ಕ್ರಮಗಳೇನು; | ಕರಾವಳಿ ಪ್ರದೇಶದಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸುವ ಸಂಬಂಧ ಪ್ರಸ್ತುತ ಕೇಂದ್ರ ಪರಿಸರ, ಅರಣ್ಯ ಮತ್ತು ವಾತಾವರಣ ಬದಲಾವಣೆ ಮಂತ್ರಾಲಯ (Ministry of Environment Forest and Climate Change) ವು ಕರಾವಳಿ ನಿಯಂತ್ರಣ ವಲಯ (CRZ) ನಿಯಮಗಳನ್ನು 2019 ರಲ್ಲಿ ಪರಿಷ್ಕರಿಸಿ ಹೊರಡಿಸಲಾಗಿರುತ್ತದೆ.<br><br>ಸದರಿ ನಿಯಮಗಳ ಪೈಕಿ, ದಿನಾಂಕ: 10.01.2026 ರಂದು ಮಂಗಳೂರಿನಲ್ಲಿ ನಡೆದ ಕರ್ನಾಟಕ ಕರಾವಳಿ ಪ್ರವಾಸೋದ್ಯಮ ಸಮಾವೇಶದಲ್ಲಿನ ನಿರ್ಣಯದಂತೆ ಕರಾವಳಿ ನಿಯಂತ್ರಣ ವಲಯ (CRZ) ನಿಯಮಗಳನ್ನು ಸಡಿಲೀಕರಿಸಲು ಕೋರಿ |

| | | |
|---|---|---|
| | | ಕೇಂದ್ರ ಪರಿಸರ, ಅರಣ್ಯ ಮತ್ತು ವಾತಾವರಣ ಬದಲಾವಣೆ ಮಂತ್ರಾಲಯ (Ministry of Environment Forest and Climate Change) ಕ್ಕೆ ಸಲ್ಲಿಸಲು ವಿವರವಾದ ಪ್ರಸ್ತಾವನೆಯನ್ನು ಸಿದ್ಧಪಡಿಸಲು ಕ್ರಮವಹಿಸಲಾಗುತ್ತಿದೆ. |
| ಈ) | ಕರಾವಳಿ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರದಿಂದ ಸುಮಾರು 20ಕ್ಕಿಂತ ಹೆಚ್ಚು ಪ್ರಸ್ತಾವನೆಗಳನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದ್ದರೂ ಕೇವಲ ಬೆರಳೆಣಿಕೆಯಷ್ಟು ಪ್ರಸ್ತಾವನೆಗಳಿಗೆ ಮಾತ್ರ ಅನುಮೋದನೆ ನೀಡಲು ಕಾರಣವೇನು; ಉಳಿದ ಪ್ರಸ್ತಾವನೆಗಳಿಗೆ ಅನುಮೋದನೆ ದೊರೆಯದಿರುವುದಕ್ಕೆ ಕಾರಣಗಳೇನು; | ಕರಾವಳಿ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ರಾಜ್ಯದ ಕರಾವಳಿ ಜಿಲ್ಲೆಗಳ ಜನಪ್ರತಿನಿಧಿಗಳಿಂದ ಹಾಗೂ ಜಿಲ್ಲಾಧಿಕಾರಿಗಳಿಂದ ಕಾಲಕಾಲಕ್ಕೆ ಸ್ವೀಕೃತವಾಗುವ ಪ್ರಸ್ತಾವನೆಗಳನ್ನು ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯದ ವಿವಿಧ ಯೋಜನೆಗಳಡಿ ಕೈಗೊಳ್ಳಲು ಅನುವಾಗುವಂತೆ ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯಕ್ಕೆ ರಾಜ್ಯ ಸರ್ಕಾರದಿಂದ 17 ಪ್ರಸ್ತಾವನೆಗಳನ್ನು ಸಲ್ಲಿಸಲಾಗಿದ್ದು, ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯದಿಂದ ಅನುಮೋದನೆ ನಿರೀಕ್ಷಿಸಲಾಗಿದೆ. |
| ಉ) | ಕರಾವಳಿಯ ಪ್ರವಾಸಯೋಗ್ಯ ಸ್ಥಳಗಳನ್ನು ಒಳಗೊಂಡಂತೆ, ಸಾಹಸ, ಕೃಷಿ, ಕ್ಯಾರವಾನ್, ಕಡಲತೀರ, ಸಾಂಸ್ಕೃತಿಕ ಮತ್ತು ಪಾರಂಪರಿಕ ಪ್ರವಾಸೋದ್ಯಮ, ನೈಸರ್ಗಿಕ ಮತ್ತು ವನ್ಯಜೀವಿ ಪ್ರವಾಸೋದ್ಯಮ, ಶಿಕ್ಷಣ, ಚಲನಚಿತ್ರ, ಗಾಲ್ಫ್, ವೈದ್ಯಕೀಯ, ಗ್ರಾಮೀಣ ಕ್ರೀಡೆ, ಯೋಗ ಮತ್ತು ಆರೋಗ್ಯ ಸೇರಿದಂತೆ ಸುಮಾರು 25 ಪ್ರವಾಸೋದ್ಯಮ ವಲಯಗಳಲ್ಲಿ ಖಾಸಗಿ ಹೂಡಿಕೆ ಆಧಾರಿತ ಪ್ರವಾಸೋದ್ಯಮ ಅಭಿವೃದ್ಧಿ ಪ್ರಸ್ತಾವನೆಗಳಿಗೆ ಸರ್ಕಾರ ಯಾವ ರೀತಿಯಲ್ಲಿ ಉತ್ತೇಜನ ನೀಡಲು ಕ್ರಮವಹಿಸುತ್ತಿದೆ? | ಕರ್ನಾಟಕ ಪ್ರವಾಸೋದ್ಯಮ ನೀತಿ 2024-29 ರಡಿ ಗುರುತಿಸಿರುವ 25 ಉತ್ಪನ್ನಗಳಲ್ಲಿ ಹೂಡಿಕೆ ಮಾಡಲು ಮುಂದೆ ಬರುವ ಖಾಸಗಿ ಹೂಡಿಕೆದಾರರಿಗೆ ಕಲ್ಪಿಸಿರುವ ಉತ್ತೇಜನಗಳ ವಿವರಗಳನ್ನು **<u>ಅನುಬಂಧ-2</u>** ರಲ್ಲಿ ಒದಗಿಸಿದೆ. |

**ಸಂಖ್ಯೆ:ಟಿಓಆರ್ 32 ಟಿಡಿವಿ 2026**

(ಎಚ್.ಕೆ.ಪಾಟೀಲ್)
ಕಾನೂನು, ನ್ಯಾಯ, ಮಾನವ ಹಕ್ಕುಗಳು,
ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ
ಪ್ರವಾಸೋದ್ಯಮ ಸಚಿವರು

# ಅನುಬಂಧ – 1

1. ಕರ್ನಾಟಕ ಪ್ರವಾಸೋದ್ಯಮವನ್ನು ಕರ್ನಾಟಕದ ಜನರಿಗೆ ಹೆಮ್ಮೆಯ ಭಾವವನ್ನಾಗಿ ಮಾಡುವ ವೈವಿಧ್ಯಮಯ ಶ್ರೇಣಿಯ ಉನ್ನತ ಗುಣಮಟ್ಟದ ಪ್ರವಾಸೋದ್ಯಮ ಉತ್ಪನ್ನಗಳು ಮತ್ತು ಸೇವೆಗಳ ಮುಖಾಂತರ ವಿಶ್ವದರ್ಜೆಯ ಅನುಭವಗಳನ್ನು ನೀಡುವ ಮೂಲಕ ದೇಶೀಯ ಮತ್ತು ಜಾಗತಿಕ ಪ್ರವಾಸೋದ್ಯಮ ನಕ್ಷೆಯಲ್ಲಿ ಕರ್ನಾಟಕವನ್ನು ಆಕರ್ಷಕ ಪ್ರವಾಸೋದ್ಯಮ ತಾಣವನ್ನಾಗಿ ಅಭಿವೃದ್ಧಿಪಡಿಸುವುದು.

2. ಪ್ರವಾಸೋದ್ಯಮವನ್ನು ಎಲ್ಲರನ್ನೂ ಒಳಗೊಳ್ಳುವಂಥ ಸಾಮಾಜಿಕ -ಆರ್ಥಿಕ ಅಭಿವೃದ್ಧಿಯ ಹರಿಕಾರನಾಗಿ, ಸಾಮಾಜಿಕ ಸಮಾನತೆಯ ಪ್ರೇರಕ ಶಕ್ತಿಯಾಗಿ, ಮಹಿಳಾ ಮತ್ತು ಯುವ ಸಬಲೀಕರಣ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಉದ್ಯಮಶೀಲತೆಯ ಮಹತ್ವದ ಚಾಲಕಶಕ್ತಿಯನ್ನಾಗಿ ಅಭಿವೃದ್ಧಿಪಡಿಸುವುದು.

3 ಕರ್ನಾಟಕದಾದ್ಯಂತ ಸದೃಢ ಪ್ರವಾಸೋದ್ಯಮ ಮೂಲಸೌಕರ್ಯವನ್ನು ಅಭಿವೃದ್ಧಿಗೊಳಿಸುವ ಮೂಲಕ, ಅತ್ಯಾವಶ್ಯಕವಾದ ಪ್ರವಾಸೋದ್ಯಮ ಸೌಲಭ್ಯಗಳನ್ನು ಒದಗಿಸುವ ಮೂಲಕ ಮತ್ತು ಸೇವಾ ಗುಣಮಟ್ಟವನ್ನು ಹೆಚ್ಚಿಸುವ ಮೂಲಕ ಕರ್ನಾಟಕಕ್ಕೆ ಭೇಟಿ ನೀಡುವ ಎಲ್ಲಾ ಪ್ರವಾಸಿಗರಿಗೆ ಸುರಕ್ಷಿತ, ತೃಪ್ತಿದಾಯಕ ಮತ್ತು ಅವಿಸ್ಮರಣೀಯ ಭೇಟಿಯನ್ನು ಖಾತರಿಪಡಿಸುವ ಪ್ರವಾಸಿ ಕೇಂದ್ರಿತ ಪರಿಸರ ವ್ಯವಸ್ಥೆಯನ್ನು ಸೃಜಿಸುವುದು.

4. ಸ್ಥಳೀಯ ಸಮುದಾಯಗಳು ಮತ್ತು ಸಾಮಾನ್ಯ ವ್ಯಕ್ತಿಗಳು ಪ್ರವಾಸೋದ್ಯಮ ಚಟುವಟಿಕೆಗಳಿಂದ ಪ್ರಯೋಜನ ಪಡೆಯುವುದನ್ನು ಖಾತ್ರಿಪಡಿಸಿಕೊಳ್ಳುವಂತೆ ಎಲ್ಲರಿಗೂ ಪ್ರವಾಸೋದ್ಯಮಕ್ಕೆ ಪ್ರವೇಶಾವಕಾಶವನ್ನು ಸಕ್ರಿಯಗೊಳಿಸುವ ಮೂಲಕ ಸುಸ್ಥಿರ ಮತ್ತು ಜವಾಬ್ದಾರಿಯುತ ಪ್ರವಾಸೋದ್ಯಮ ಪದ್ಧತಿಗಳನ್ನು ಅಳವಡಿಸಿಕೊಳ್ಳಲು ಅನುಕೂಲ ಕಲ್ಪಿಸುವುದು.

5. ಕೋಮು ಸೌಹಾರ್ದತೆ, ಶಾಂತಿ ಮತ್ತು ಅರಿವನ್ನು ಮೂಡಿಸಲು ಮತ್ತು ಪ್ರವಾಸೋದ್ಯಮವನ್ನು ಕಲಿಕೆಯ ಸಾಧನವಾಗಿ ಉತ್ತೇಜಿಸಲು ಪ್ರವಾಸೋದ್ಯಮದ ಸಾಮರ್ಥ್ಯವನ್ನು ಸಾಕಾರಗೊಳಿಸುವುದು.

6. ಯುನೆಸ್ಕೋ ವಿಶ್ವ ಪಾರಂಪರಿಕ ತಾಣಗಳು ಸೇರಿದಂತೆ ಪಾರಂಪರಿಕ ಸ್ವತ್ತುಗಳ ಗುರುತಿಸುವಿಕೆ, ಸಂರಕ್ಷಣೆ, ದತ್ತು ಮತ್ತು ಪ್ರಚಾರ ಹಾಗೂ ಅವುಗಳ ಪ್ರವಾಸೋದ್ಯಮ ಮೌಲ್ಯದ ಸಾಫಲ್ಯಕ್ಕೆ ಚಾಲನೆ ನೀಡುವುದು

7. ಜವಾಬ್ದಾರಿಯುತ ಪ್ರವಾಸೋದ್ಯಮದ ಮೂಲಕ ಕರ್ನಾಟಕದ ಶ್ರೀಮಂತ ಆಧ್ಯಾತ್ಮಿಕ ಪರಂಪರೆ, ಧಾರ್ಮಿಕ ವೈವಿಧ್ಯತೆ ಮತ್ತು ಪವಿತ್ರ ತಾಣಗಳನ್ನು ಎತ್ತಿ ತೋರಿಸುವ ಮೂಲಕ ಆಧ್ಯಾತ್ಮಿಕ ಪ್ರವಾಸೋದ್ಯಮ, ಜ್ಞಾನವರ್ಧನೆ, ಆಂತರಿಕ ಶಾಂತಿ ಮತ್ತು ಕೋಮು ಸೌಹಾರ್ದತೆಯನ್ನು ಉತ್ತೇಜಿಸುವುದು.

8. ಕರಾವಳಿ ಪರಿಸರ ವ್ಯವಸ್ಥೆಗಳ ಸಂರಕ್ಷಣೆಯನ್ನು ಖಾತ್ರಿಪಡಿಸುವುದು ಮತ್ತು ಪ್ರವಾಸೋದ್ಯಮ ಮೌಲ್ಯ ಸರಪಳಿಯಲ್ಲಿ ಸ್ಥಳೀಯ ಸಮುದಾಯದ ಸಹಭಾಗಿತ್ವವನ್ನು ಉತ್ತೇಜಿಸುವಲ್ಲಿ, ವಿಶ್ವ ದರ್ಜೆಯ ಸುಸ್ಥಿರ ಪ್ರವಾಸೋದ್ಯಮ ಮೂಲಸೌಕರ್ಯವನ್ನು ಅಭಿವೃದ್ಧಿಪಡಿಸುವ, ಪ್ರವಾಸಿಗರ ಅನುಭವಗಳನ್ನು ಶ್ರೀಮಂತಗೊಳಿಸುವ ಮತ್ತು ಕರಾವಳಿ ಕರ್ನಾಟಕದ ಸಮೃದ್ಧ ಸಾಂಸ್ಕೃತಿಕ ಮತ್ತು ನೈಸರ್ಗಿಕ ಪರಂಪರೆಯನ್ನು ಉತ್ತೇಜಿಸುವ ಮೂಲಕ ಕರ್ನಾಟಕವನ್ನು ಪ್ರಮುಖ ಕರಾವಳಿ ಪ್ರವಾಸೋದ್ಯಮ ತಾಣವನ್ನಾಗಿಸುವುದು.

9. ಪ್ರವಾಸಿಗರು ಅನುಭವವನ್ನು ವರ್ಧಿಸಲು ಮತ್ತು ಸ್ಥಳೀಯ ಆರ್ಥಿಕ ಅಭಿವೃದ್ಧಿಯನ್ನು ಉತ್ತೇಜಿಸಲು ರಾಜ್ಯದ ವೈವಿಧ್ಯಮಯ ಸಂಪ್ರದಾಯಗಳು, ಹಬ್ಬಗಳು, ಕರಕುಶಲ ಮತ್ತು ಪಾಕಪದ್ಧತಿಗಳನ್ನು ಉತ್ತೇಜಿಸುವ ಮೂಲಕ ಕರ್ನಾಟಕವನ್ನು ಸಾಂಸ್ಕೃತಿಕ ಮತ್ತು ಅನುಭವಾತ್ಮಕವಾದ ಪ್ರವಾಸೋದ್ಯಮದ ಕೇಂದ್ರವಾಗಿ ಅಭಿವೃದ್ಧಿಪಡಿಸುವುದು.

10. ಕರ್ನಾಟಕದಲ್ಲಿ ಪ್ರವಾಸೋದ್ಯಮದ ಸುಧಾರಣೆಗಾಗಿ ಎಲ್ಲಾ ಭಾಗೀದಾರರು ಸಮನ್ವಯತೆಯಿಂದ ಮತ್ತು ಸಕ್ರಿಯಾತ್ಮಕವಾಗಿ ಭಾಗವಹಿಸುವುದನ್ನು ಖಾತರಿಪಡಿಸುವುದು ಮತ್ತು ಪ್ರವಾಸೋದ್ಯಮ ವಲಯದಲ್ಲಿ ಖಾಸಗಿ ವಲಯದ ಸಹಭಾಗಿತ್ವವನ್ನು ಪ್ರೋತ್ಸಾಹಿಸಲು ಹೂಡಿಕೆ-ಸ್ನೇಹಿ ನೀತಿಗಳೊಂದಿಗೆ ಅನುಕೂಲಕರ ವ್ಯವಹಾರಾತ್ಮಕ ಪರಿಸರವನ್ನು ಒದಗಿಸುವುದು.

11. ಸಮುದಾಯ-ಆಧಾರಿತ ಪ್ರವಾಸೋದ್ಯಮವನ್ನು ಉತ್ತೇಜಿಸುವ ಸಂದರ್ಭದಲ್ಲಿ ಪರಿಸರದ ಮೇಲಿನ ಪರಿಣಾಮವನ್ನು ಕಡಿಮೆ ಮಾಡುವ ಪರಿಸರ ಸ್ನೇಹಿ ಉಪಕ್ರಮಗಳನ್ನು ಅಳವಡಿಸಿಕೊಂಡು ಕರ್ನಾಟಕದ ಪ್ರವಾಸೋದ್ಯಮ ಆಸ್ತಿಗಳ ದೀರ್ಘಾವಧಿಯ ಸುಸ್ಥಿರತೆಯನ್ನು ಖಚಿತಪಡಿಸಿಕೊಳ್ಳಲು ಹವಾಮಾನ-ತಾಳಿಕೆ ಪ್ರವಾಸೋದ್ಯಮ ಪದ್ಧತಿಗಳನ್ನು ಉತ್ತೇಜಿಸುವುದು.

12. ಉದ್ದೇಶಿತ ಕೌಶಲ್ಯ ಅಭಿವೃದ್ಧಿಯನ್ನು ಒದಗಿಸುವ ಮೂಲಕ ಮತ್ತು ಲಾಭದಾಯಕ ಉದ್ಯೋಗ, ವೃತ್ತಿ ಬೆಳವಣಿಗೆ ಮತ್ತು ದೃಢವಾದ ಪ್ರತಿಭಾ ತಂಡವನ್ನು ರಚಿಸುವ ಮೂಲಕ ಪ್ರಯಾಣ, ಪ್ರವಾಸೋದ್ಯಮ ಮತ್ತು ಆತಿಥ್ಯ ಕ್ಷೇತ್ರಕ್ಕಾಗಿ ನುರಿತ ಕಾರ್ಯಪಡೆಯನ್ನು ಅಭಿವೃದ್ಧಿಪಡಿಸುವುದು.

13. ಪ್ರವಾಸಿ ತಾಣಗಳನ್ನು, ಪ್ರವಾಸಿಗರ ಸೇವೆಗಳನ್ನು ಮತ್ತು ಒಟ್ಟಾರೆ ಪ್ರವಾಸಿಗರ ಅನುಭವವನ್ನು ಮೇಲ್ದರ್ಜೆಗೇರಿಸಲು ಕರ್ನಾಟಕದಲ್ಲಿರುವ ತಂತ್ರಜ್ಞಾನದ ಸಾಮರ್ಥ್ಯವನ್ನು ಸಮರ್ಥವಾಗಿ ಬಳಸಿಕೊಂಡು ಪ್ರವಾಸೋದ್ಯಮದಲ್ಲಿ ಸಂಶೋಧನೆ, ವಿಶ್ಲೇಷಣೆ ಮತ್ತು ನಾವೀನ್ಯತೆಗಳನ್ನು ಉತ್ತೇಜಿಸುವುದು.

14. ಕರ್ನಾಟಕ ಪ್ರವಾಸೋದ್ಯಮ ನೀತಿಯು, ಕರ್ನಾಟಕ ಪ್ರವಾಸೋದ್ಯಮ ವ್ಯಾಪಾರ (ಸೌಲಭ್ಯ ಮತ್ತು ನಿಯಂತ್ರಣ) ಅಧಿನಿಯಮ, 2015 ರ ಒಟ್ಟಾರೆ ಅನುಷ್ಠಾನದೊಂದಿಗೂ ಸಹ ಹೊಂದಿಕೆಯಾಗುತ್ತದೆ.

******

# ಅನುಬಂಧ – 2

**ಕರ್ನಾಟಕ ಪ್ರವಾಸೋದ್ಯಮ ನೀತಿ 2024-29ರ ಅಡಿಯಲ್ಲಿ ಖಾಸಗಿ ಹೂಡಿಕೆದಾರರಿಗೆ ಉತ್ತೇಜನ ನೀಡಲು ಈ ಕೆಳಕಂಡ ಪ್ರೋತ್ಸಾಹಕಗಳು, ಸಹಾಯಧನಗಳು ಮತ್ತು ರಿಯಾಯಿತಿಗಳನ್ನು ನೀಡಲು ಅವಕಾಶ ಕಲ್ಪಿಸಲಾಗಿರುತ್ತದೆ.**

| ಕ್ರಮ ಸಂಖ್ಯೆ. | ಪ್ರವಾಸೋದ್ಯಮ ಯೋಜನೆ | ಕೆ ಟಿ ಟಿ ಎಫ್ ಅಧಿನಿಯಮದ ಅಡಿಯಲ್ಲಿ ನೋಂದಣಿ | ಬಂಡವಾಳ ಹೂಡಿಕೆ ಸಹಾಯ ಧನ | ಬಡ್ಡಿ ಸಹಾಯ ಧನ | ಮುದ್ರಾಂಕ ಶುಲ್ಕ ವಿನಾಯಿತಿ | ರಿಯಾಯಿತಿ ನೋಂದಣಿ ಶುಲ್ಕಗಳು | ಭೂ ಪರಿವರ್ತನೆ ಶುಲ್ಕದ ಮರುಪಾವತಿ |
|---|---|---|---|---|---|---|---|
| 1. | ಸಾಹಸ ಪ್ರವಾಸೋದ್ಯಮ ಯೋಜನೆ | ✓ | ✓ | | ✓ | ✓ | ✓ |
| 2. | ಕೃಷಿ ಪ್ರವಾಸೋದ್ಯಮ ಯೋಜನೆ | ✓ | ✓ | | ✓ | ✓ | ✓ |
| 3. | ಅಪಾರ್ಟ್ಮೆಂಟ್ ಹೋಟೆಲ್/ ಸೇವಾ ಅಪಾರ್ಟ್ಮೆಂಟ್ | ✓ | | | ✓ | ✓ | |
| 4. | ಅಕ್ವೇರಿಯಂ/ ಓಷನೇರಿಯಂ | ✓ | | | ✓ | ✓ | ✓ |
| 5. | ಬೀಚ್ ಶ್ಯಾಕ್ | ✓ | | | | | |
| 6. | ಬೆಡ್ ಮತ್ತು ಬ್ರೇಕ್‌ಫಾಸ್ಟ್ | ✓ | | | ✓ | ✓ | ✓ |
| 7. | ಮನರಂಜನಾ ಪಾರ್ಕ್ | ✓ | | | ✓ | ✓ | ✓ |
| 8. | ಕ್ಯಾರವಾನ್ ಪಾರ್ಕ್ | ✓ | ✓ | | ✓ | ✓ | ✓ |
| 9. | ಕ್ಯಾರವಾನ್ ಪ್ರವಾಸೋದ್ಯಮ ಯೋಜನೆ | ✓ | ✓ | | ✓ | ✓ | ✓ |
| 10. | ಸಮಾವೇಶ ಕೇಂದ್ರ | ✓ | ✓ | | ✓ | ✓ | ✓ |
| 11. | ಕ್ರೂಸ್ ಪ್ರವಾಸೋದ್ಯಮ ಯೋಜನೆ | ✓ | ✓ | | ✓ | ✓ | |
| 12. | ಸಾಂಸ್ಕೃತಿಕ ಕೇಂದ್ರ | ✓ | | | ✓ | ✓ | ✓ |
| 13. | ಸಾಂಸ್ಕೃತಿಕ ಗ್ರಾಮ/ ಪ್ರವಾಸಿ ಗ್ರಾಮ | ✓ | | ✓ | ✓ | ✓ | ✓ |
| 14. | ಪರಿಸರ ಪ್ರವಾಸೋದ್ಯಮ ಯೋಜನೆ | ✓ | | | ✓ | ✓ | ✓ |
| 15. | ಫಾರ್ಮ್ ಸ್ಟೇ | ✓ | | | ✓ | ✓ | |
| 16. | ಚಲನಚಿತ್ರ ನಗರಿ | ✓ | | | ✓ | ✓ | ✓ |
| 17. | ಗಾಲ್ಫ್ ಕೋರ್ಸ್ | ✓ | | | ✓ | ✓ | ✓ |
| 18. | ಅತಿಥಿ ಗೃಹ | ✓ | | | ✓ | ✓ | ✓ |
| 19. | ಪಾರಂಪರಿಕ ಹೋಟೆಲ್ | ✓ | | ✓ | ✓ | ✓ | ✓ |
| 20. | ಪಾರಂಪರಿಕ ಪ್ರವಾಸೋದ್ಯಮ ಯೋಜನೆ | ✓ | | | ✓ | ✓ | ✓ |
| 21. | ಪಾರಂಪರಿಕ ನಡಿಗೆ / ಮಾರ್ಗದರ್ಶಿ ಪ್ರವಾಸ | ✓ | | | ✓ | ✓ | |
| 22. | ಹೋಂ ಸ್ಟೇ | ✓ | | | ✓ | ✓ | |
| 23. | ಹೋಟೆಲ್ ಬಜೆಟ್ | ✓ | ✓ | | ✓ | ✓ | ✓ |
| 24. | ಹೋಟೆಲ್ ಪ್ರೀಮಿಯಂ | ✓ | ✓ | | ✓ | ✓ | ✓ |

| | | | | | | | |
|---|---|---|---|---|---|---|---|
| 25. | ಹೌಸ್ ಬೋಟ್ | ✓ | ✓ | | ✓ | ✓ | ✓ |
| 26. | MICE ಕೇಂದ್ರ | ✓ | ✓ | | ✓ | ✓ | ✓ |
| 27. | ವಸ್ತು ಸಂಗ್ರಹಾಲಯಗಳು ಮತ್ತು ಗ್ಯಾಲರಿಗಳು | ✓ | | ✓ | ✓ | ✓ | ✓ |
| 28. | ಪ್ರವಾಸಿ ಸ್ನೇಹಿ ಸಂಕೀರ್ಣ (ಪ್ರವಾಸಿ ಸೌಲಭ್ಯ ಕೇಂದ್ರ) | ✓ | | | ✓ | ✓ | ✓ |
| 29. | ರೋಪ್ ವೇ | ✓ | | | ✓ | ✓ | ✓ |
| 30. | ಧ್ವನಿ ಮತ್ತು ಬೆಳಕಿನ ಪ್ರದರ್ಶನ | ✓ | | ✓ | ✓ | ✓ | ✓ |
| 31. | ಟೆಂಟ್ ವಸತಿ ಸೌಕರ್ಯ | ✓ | | | ✓ | ✓ | ✓ |
| 32. | ಥೀಮ್ ಪಾರ್ಕ್ | ✓ | | | ✓ | ✓ | ✓ |
| 33. | ಟೈಮ್ ಶೇರ್ ರೆಸಾರ್ಟ್ | ✓ | | | ✓ | ✓ | ✓ |
| 34. | ಪ್ರವಾಸಿ ಮಾರ್ಗದರ್ಶಿ | ✓ | | | | | |
| 35. | ಪ್ರವಾಸೋದ್ಯಮ ಅಥವಾ ಆತಿಥ್ಯ ತರಬೇತಿ ಸಂಸ್ಥೆ | ✓ | | | ✓ | ✓ | ✓ |
| 36. | ಪ್ರವಾಸೋದ್ಯಮ ನವೋದ್ಯಮ | ✓ | | | | | |
| 37. | ಪ್ರವಾಸ ನಿರ್ವಾಹಕ | ✓ | | | | | |
| 38. | ಪ್ರವಾಸಿ ಸಾರಿಗೆ ನಿರ್ವಾಹಕ | ✓ | | | | | |
| 39. | ಪ್ರವಾಸಿ ವ್ಯಾಖ್ಯಾನ ಕೇಂದ್ರ | ✓ | | | ✓ | ✓ | ✓ |
| 40. | ಟ್ರಾವೆಲ್ ಏಜೆಂಟ್ | ✓ | | | | | |
| 41. | ಯಾತ್ರಿ ನಿವಾಸ | ✓ | | | ✓ | ✓ | ✓ |
| 42. | ಸ್ವಾಸ್ಥ್ಯ ಕೇಂದ್ರ | ✓ | ✓ | | ✓ | ✓ | ✓ |
| 43. | ರಸ್ತೆ ಬದಿ ಸೌಲಭ್ಯಗಳು | ✓ | ✓ | | ✓ | ✓ | ✓ |
| 44. | ಯುವ ಪ್ರವಾಸೋದ್ಯಮ ಕ್ಲಬ್ | ✓ | | | | | |

*****

## ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯದ ಸ್ವದೇಶ್ ದರ್ಶನ್ 2.0 ಯೋಜನೆಯಡಿ ಸಲ್ಲಿಸಿರುವ ಪ್ರಸ್ತಾವನೆಗಳ ವಿವರ

| ಕ್ರ ಸಂ | ಜಿಲ್ಲೆ | ತಾಲ್ಲೂಕು | ಪ್ರವಾಸಿ ತಾಣ | ಯೋಜನೆಯ ಹೆಸರು | ಅಂದಾಜು ಮೊತ್ತ (ರೂ.ಕೋಟಿಗಳಲ್ಲಿ) | ಷರಾ |
|---|---|---|---|---|---|---|
| 1 | ಉಡುಪಿ | ಬೈಂದೂರು | ಬೈಂದೂರು | ತ್ರಾಸಿ, ಮರವಂತೆ ಹಾಗೂ ಪಡುಬಿದ್ರೆ ಬೀಚ್ ಅಭಿವೃದ್ಧಿ | 110.00 | 29.10.2024 ರಂದು ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯಕ್ಕೆ, ಸರ್ಕಾರದ ಕಾರ್ಯದರ್ಶಿಗಳು, ಪ್ರ ಇ ರವರಿಂದ ಪತ್ರ ಬರೆಯಲಾಗಿದೆ |
| 2 | | ಕಾರ್ಕಳ | ಕಾರ್ಕಳ | ರಾಮಸಮುದ್ರ ಕೆರೆ ಅಭಿವೃದ್ಧಿ | 112.30 | |
| 3 | | ಬ್ರಹ್ಮಾವರ | ಬಾರ್ಕೂರು ಕೋಟೆ | ಬಾರ್ಕೂರು ಕೋಟೆ | 10.00 | 07.03.2025 ರಂದು ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ |
| 4 | | ಬ್ರಹ್ಮಾವರ | ಕೋಡಿ ಕುಂದಾಪುರ ಬೀಚ್ | ಕೋಟಿ ಕುಂದಾಪುರ ಬೀಚ್ | 7.00 | |
| 5 | | ಕುಂದಾಪುರ | ಕೋಡಿ ಕನ್ಯಾನ್ ಬೀಚ್ | ಕೋಡಿ ಕನ್ಯಾನ್ ಬೀಚ್ | 10.00 | |
| 6 | | ಉಡುಪಿ | ಕೋಟಾ ಶಿವರಾಂ ಕಾರಂತ್ ಥೀಮ್ ಪಾರ್ಕ್ | ಕೋಟಾ ಶಿವರಾಂ ಕಾರಂತ್ ಥೀಮ್ ಪಾರ್ಕ್ | 30.00 | 18.12.2024 ರಂದು ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯಕ್ಕೆ ಸರ್ಕಾರದ ಕಾರ್ಯದರ್ಶಿಗಳು, ಪ್ರ ಇ ರವರಿಂದ ಪತ್ರ ಬರೆಯಲಾಗಿದೆ |
| 7 | | ಉಡುಪಿ | ಪಡುವರಿ ಸೋಮೇಶ್ವರ ಕೊಲ್ಲೂರು ಸರ್ಕೂಟ್ | ಪಡುವರಿ ಸೋಮೇಶ್ವರ ಕೊಲ್ಲೂರು ಸರ್ಕೂಟ್ | 100.00 | |
| 8 | | ಉಡುಪಿ | Glass Brdige at Kaup light house | Glass Brdige at Kaup light house | 10.00 | |
| 9 | | ಉಡುಪಿ | Development of Kamini Island and infrasrtucture enhancement of Padubidri Blue Flag Beach | Development of Kamini Island and infrasrtucture enhancement of Padubidri Blue Flag Beach | 10.00 | |
| 10 | ಉತ್ತರ ಕನ್ನಡ | ಕುಮಟಾ | ಗೋಕರ್ಣ ಮತ್ತು ಯಾಣ ಪ್ರದೇಶದ ಸಮಗ್ರ ಅಭಿವೃದ್ಧಿ | ಗೋಕರ್ಣ ಮತ್ತು ಯಾಣ ಪ್ರದೇಶದ ಸಮಗ್ರ ಅಭಿವೃದ್ಧಿ | 500.00 | ವಿಸ್ತೃತ ಯೋಜನಾ ವರದಿ ಸಿದ್ಧಪಡಿಸುವಂತೆ ಕೋರಿ ಜಿಲ್ಲಾಧಿಕಾರಿಗಳಿಗೆ ದಿನಾಂಕ: 12.12.2024 ರಂದು ಪತ್ರ ಬರೆಯಲಾಗಿದೆ |
| 11 | ಉಡುಪಿ | ಉಡುಪಿ | Kollur Regional Circuit (SASCI) | Kollur Regional Circuit (SASCI) | 179.99 | 18.08.2025 ರಂದು ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ |
| | | | | ಒಟ್ಟು | 1079.29 | |

## ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯದ ಪ್ರಸಾದ್ ಯೋಜನೆಯಡಿ ಇಲಾಖೆಗೆಸ್ವೀಕೃತವಾಗಿರುವ ಕರಾವಳಿ ಕರ್ನಾಟಕ ಭಾಗದ ಪ್ರಸ್ತಾವನೆಗಳ ವಿವರ

| ಕ್ರ ಸಂ | ಜಿಲ್ಲೆ | ತಾಲ್ಲೂಕು | ಪ್ರವಾಸಿ ತಾಣ | ಯೋಜನೆಯ ಹೆಸರು | ಅಂದಾಜು ಮೊತ್ತ (ರೂ.ಕೋಟಿಗಳಲ್ಲಿ) | ಷರಾ |
|---|---|---|---|---|---|---|
| 1 | ದಕ್ಷಿಣ ಕನ್ನಡ | ಬೆಳ್ತಂಗಡಿ | ಶ್ರೀ ನಂದಿಕೇಶ್ವರ ದೇವಸ್ಥಾನ, ನಂದಿಬೆಟ್ಟ | ಶ್ರೀ ನಂದಿಕೇಶ್ವರ ದೇವಸ್ಥಾನ | 22.00 | ಪ್ರಸ್ತಾವನೆಯನ್ನು ಕೇಂದ್ರಕ್ಕೆ ದಿನಾಂಕ: 19.12.2024 ರಂದು ಸಲ್ಲಿಸಲಾಗಿದೆ |
| 2 | | ಬೆಳ್ತಂಗಡಿ | ಶಿಶಿಲ | ಶ್ರೀ ಶಿಶಿಲೇಶ್ವರ ದೇವಸ್ಥಾನ ಅಭಿವೃದ್ಧಿ | 23.00 | |
| 3 | | ಬೆಳ್ತಂಗಡಿ | ಮಿತ್ತಬೈಲು | ಶ್ರೀ ಕೊಳ್ಳಿ ದುರ್ಗಾಪರಮೇಶ್ವರಿ ದೇವಸ್ಥಾನ | 9.00 | |
| 4 | | ಪುತ್ತೂರು | ಪುತ್ತೂರು | ಶ್ರೀ ಮಹಾಲಿಂಗೇಶ್ವರ ದೇವಸ್ಥಾನ | 54.85 | 21.02.2025 ರಂದು ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ |
| 5 | | ಸುಳ್ಯ | ತೊಡಿಕಾನ | ಶ್ರೀ ಮಲ್ಲಿಕಾರ್ಜುನ ದೇವಸ್ಥಾನ ಅಭಿವೃದ್ಧಿ | 33.87 | 21.02.2025 ರಂದು ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ |
| 6 | | ಪುತ್ತೂರು | ಉಪ್ಪಿನಂಗಡಿ | ಶ್ರೀ ಸಹಸ್ರಲಿಂಗೇಶ್ವರ ಮಹಾಕಾಳಿ ದೇವಸ್ಥಾನ ಅಭಿವೃದ್ಧಿ | 49.67 | 21.02.2025 ರಂದು ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ |
| | | | | ಒಟ್ಟು | 192.39 | |